**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಎಸ್.ಸಿ.54/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಆಕಾಶ |
| ತಂದೆಯ ಹೆಸರು | : | ಬಸವರಾಜಪ್ಪ |
| ವಯಸ್ಸು | : | 21 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಚಿಕ್ಕಬೂದಿಹಾಳ |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 23-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಚಾಸಾ-5 ಮತ್ತು 7 ರವರ ಪರಿಚಯ ಇದೆ. ಅವರು ನಮ್ಮ ಎಸ್.ಆರ್. ಬಾರ್ ಆ್ಯಂಡ್ ರೆಸ್ಟೋರೆಂಟ್ ನಲ್ಲಿ supplier ಆಗಿ ಕೆಲಸ ಮಾಡುತ್ತಾರೆ. ಸದರಿ ಬಾರ್ ನಲ್ಲಿ ನಾನು ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಬಾರ್ ನ ಮಾಲೀಕರು ಚಾಸಾ-6 ರವರು ಇರುತ್ತಾರೆ. ಬಾರ್ ನಲ್ಲಿ ನನ್ನ ಕೆಲಸ ಬೆಳಿಗ್ಗೆ 9.00 ರಿಂದ ರಾತ್ರಿ 11.00 ಗಂಟೆಯವರೆಗೆ ಇರುತ್ತದೆ. ಆ ಬಾರ್ ಬಂಬೂ ಬಜಾರ್ ರಸ್ತೆಯಲ್ಲಿ ಗಣೇಶ ಗುಡಿ ಹತ್ತಿರ ಬರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ನೋಡಿದ್ದೇನೆ. ದಿಃ 05-11-2023 ರಂದು ರಾತ್ರಿ 10.00-10.10 ರ ಸಮಯದಲ್ಲಿ ನಮ್ಮ ಬಾರ್ ಗೆ ಬಂದು Cold beer ಕೇಳಿದರು. ಅದಕ್ಕೆ ನಾನು Cold beer ಕೋಲ್ಡ್ ಬಿಯರ್ ಖಾಲಿ ಆಗಿವೆ, Hot beer ಇದೆ

ಅಂತ ಹೇಳಿದೆ. ಆ ರೀತಿ ಉತ್ತರ ಕೊಟ್ಟಿದ್ದಕ್ಕೆ 'ಬಾರ್ ಯಾಕೆ ಇಟ್ಟುಕೊಂಡಿದ್ದೀಯಾ ಕ್ಲೋಸ್ ಮಾಡು' ಅಂತ ಹೇಳಿದರು ಮತ್ತು ನನಗೆ ಚಾಕುವಿನಿಂದ ಕೊಲ್ಲಲು ಪ್ರಯತ್ನಿಸಿದರು ಆಗ ನಾನು ತಪ್ಪಿಸಿಕೊಂಡೆ. ಆಗ ನನ್ನೊಂದಿಂಗೆ ಚಾಸಾ-5, 7 ಅಲ್ಲಿ ಇದ್ದರು. ಆಗ ನಾನು ಮಾಲೀಕರಿಗೆ ಫೋನ್ ಮಾಡಿ ವಿಷಯ ತಿಳಿಸಿದೆನು. ಅವರು 10-15 ನಿಮಿಷದಲ್ಲಿ ಬಂದರು. ಆ ವಿಷಯ ಬಗ್ಗೆ ಮಾಲೀಕರಾದ ಚಾಸಾ-6 ರವರು ಬಂದು ನ್ಯಾಯಾಲಯದ ಮುಂದೆ ಇರುವ ಆರೋಪಿತರಿಗೆ ಕೇಳಿದರು. Cold beer ಬೇಕಿದ್ದರೆ ಬೇರೆ ಕಡೆ ತೆಗೆದುಕೊಳ್ಳಿ ಯಾಕೆ ಹೀಗೆ ಗಲಾಟೆ ಮಾಡುತ್ತಿದ್ದಾರೆ ಅಂತ ಕೇಳಿದರು. ಮಾಲೀಕರಿಗೆ 1 ನೇ ಆರೋಪಿ ಚಾಕು ಹಾಕಿ ಕೊಲ್ಲಲು ಹೋದರು ಆಗ ಅವರು ತಪ್ಪಿಸಿಕೊಂಡರು. ಮಾಲೀಕರಿಗೆ ಆರೋಪಿತರು ಕೈನಿಂದ ಹೊಡೆದರು. ಆ ಚಾಕು ನೆಲಕ್ಕೆ ಬಿದ್ದಾಗ ನಾನುಅದನ್ನು ಚಾಸಾ-7 ರವರಿಗೆ ಕೊಟ್ಟೆನು.

ಈ ಹಂತದಲ್ಲಿ ಸಾಕ್ಷಿದಾರರು ಸಮಯ ಕೋರಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.

ದಿ: 14-10-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

3. ಬಾರ್ ಮಾಲೀಕರು ಸ್ಥಳಕ್ಕೆ ಬಂದು 1 ಮತ್ತು 2 ನೇ ಆರೋಪಿತರಿಗೆ " ನಮ್ಮ ಬಾರ್ ನಲ್ಲಿ Cold beer ಇರುವುದಿಲ್ಲ ಯಾಕೆ ನಮ್ಮ ಹುಡುಗರ ಹತ್ತಿರ ಗಲಾಟೆ ಮಾಡುತ್ತೀರಾ" ಅಂತ ಕೇಳಿದಾಗ ಆರೋಪಿತರು " Cold beer ಇಲ್ಲ ಅಂದರೆ ಬಾರ್ ಯಾಕೆ ನಡೆಸುತ್ತೀರಾ " ಅಂತ ದಬ್ಬಾಳಿಕೆ ಮಾಡಿದರು. ನಮ್ಮ ಮಾಲೀಕರಿಗೆ ದಬ್ಬಾಡಿ ನೆಲಕ್ಕೆ ಕೆಡವಿ ಚಾಕುವಿನಿಂದ ಮಾಲೀಕರನ್ನು ಸಾಯಿಸುವ ಉದ್ದೇಶದಿಂದ 1 ನೇ ಆರೋಪಿ ಚಾಕು ಹಾಕಲು ಹೋದಾಗ ನಾನು, ಚಾಸಾ-7, ಸತೀಶ ಮತ್ತು ನಾಗರಾಜರವರು ಗಲಾಟೆಯನ್ನು ಬಿಡಿಸಿದೆವು. ನಂತರ 2 ನೇ ಆರೋಪಿ ಅದೇ ಚಾಕು ಹಾಕಲು ನಮ್ಮ ಮಾಲೀಕರಿಗೆ ಹೋದಾಗ ಆ ಚಾಕು ನೆಲಕ್ಕೆ ಬಿತ್ತು, ಚಾಸಾ-7 ರವರು ಆ ಚಾಕುವನ್ನು ತೆಗೆದುಕೊಳ್ಳಲು ಹೋದಾಗ 2 ನೇ ಆರೋಪಿಯು ಚಾಕುವಿನಿಂದ ಚಾಸಾ-7 ರವರಿಗೆ ಹಾಕಲು ಹೋದಾಗ, ಚಾಸಾ-7 ರವರ ಕೈಗೆ ಗಾಯವಾಯಿತು.

ಈ ಹಂತದಲ್ಲಿ ಸಾಕ್ಷಿದಾರರು ಸಮಯ ಕೋರಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.